**ಓ.ಎಸ್. ನಂಃ 193/2022**
**ಡಿ ಡಬ್ಲ್ಯೂಃ 1**

ದಿನಾಂಕಃ 19-08-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಯರ ಪರ ಶ್ರೀ ಜಿ ಎಸ್ ಎನ್ ವಕೀಲರಿಂದಃ**

ದಾವಾ ನಮ್ಮ ಹಿರಿಯರ ಆಸ್ತಿಗಳು ಆಗಿರುತ್ತವೆ. ಆದರೆ ಅವುಗಳು ಮೂಲತಃ ಯಾರ ಹೆಸರಿನಲ್ಲಿ ಇದ್ದವು ನನಗೆ ಗೊತ್ತಿಲ್ಲ. ನನ್ನ ತಂದೆಗೆ ನಾವು ಒಟ್ಟು ಐದು ಜನ ಮಕ್ಕಳು ಇದ್ದೇವೆ. ವಾದಿ ಹಾಗೂ 2 ರಿಂದ 4 ನೇ ಪ್ರತಿವಾದಿಯರು ನನ್ನ ಅಣ್ಣಂದಿರು ಹಾಗೂ ಅಕ್ಕಂದಿರು ಆಗಿರುತ್ತಾರೆ. ನನ್ನ ತಾಯಿಯ ಹೆಸರು ಅಮರಮ್ಮ ಎಂದು ಇರುತ್ತದೆ. ಬಸಮ್ಮ ನನ್ನ ಅಜ್ಜಿ ಆಗಿರುತ್ತಾರೆ. ದಾವಾ ಆಸ್ತಿಗಳ ಸರ್ವೆ ನಂ.93/1 ಕ್ಷೇತ್ರ 10 ಎಕರೆ 20 ಗುಂಟೆ, 93/2 ಕ್ಷೇತ್ರ 31 ಗುಂಟೆ ಹಾಗೂ ಸರ್ವೆ ನಂ.98 ಕ್ಷೇತ್ರ 08 ಎಕರೆ 15 ಗುಂಟೆ ಇರುತ್ತವೆ. ಬಸಮ್ಮ ರವರಿಗೆ ವಯಸ್ಸಾದಾಗ ಶರಣಪ್ಪರವರೊಂದಿಗೆ ವಾಸವಾಗಿದ್ದರು ಎಂದರೆ ಸಾಕ್ಷಿಯು ಸರಿ, ನನ್ನ ತಂದೆಯೂ ಸಹ ಒಟ್ಟು ಕುಟುಂಬದಿಂದ ಬೇರೆಯಾಗಿರಲಿಲ್ಲ ಆದರೆ ರಾಯಚೂರಿನಲ್ಲಿ ನೌಕರಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

2. ದಾವಾ ಅಸ್ತಿಗಳು ಮೂಲತಃ ನೀಲಮ್ಮ ಗಂಡ ಶಂಕ್ರಪ್ಪ ರವರ ಹೆಸರಿನಲ್ಲಿ ಇದ್ದವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನೀಲಮ್ಮ ರವರಿಗೆ ಬಸಮ್ಮ ಎಂಬ ಒಬ್ಬ ಮಗಳು ಮಾತ್ರ ಇದ್ದಳು ಎಂದರೆ ಸರಿ. ಸದರಿ ನೀಲಮ್ಮ ರವರಿಗೆ ಗಂಡು ಸಂತಾನ ಇರಲಿಲ್ಲ ಎಂದರೆ ಸರಿ. ಅವರಿಗೆ ಗಂಡು ಮಕ್ಕಳು ಇರದಿದ್ದ ಕಾರಣ ತಮ್ಮ ಇಳಿವಯಸ್ಸಿ ನಲ್ಲಿ ಶರಣಪ್ಪ ರವರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು ನೀಲಮ್ಮ ರವರನ್ನು ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ, ನನ್ನ ದೊಡ್ಡಪ್ಪ ಶರಣಪ್ಪ ರವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ತಮ್ಮನ್ನು ನೋಡಿಕೊಳ್ಳುತಿದ್ದರಿಂದ ನೀಲಮ್ಮ ರವರು ಅವರ ಹೆಸರಿಗೆ ದಿಃ 22.04.1987 ರಂದು ಮರಣ ಶಾಸನ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನದ ಮೂಲಕ ಅನುಸೂಚಿ 1 ಮತ್ತು 2 ರಲ್ಲಿನ ಆಸ್ತಿಗಳಲ್ಲಿ 1 ಮತ್ತು 2 ನೇ ಪ್ರತಿವಾದಿಯರಿಗೆ ತಲಾ 05

ಎಕರೆ 10 ಗುಂಟೆ ಆಸ್ತಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನಕ್ಕೆ ಬಸಮ್ಮ ಗಂಡ ಅಮೀನರೆಡ್ಡಿ ಹಾಗೂ ಮಾಣಿಕಪ್ಪ ತಂದೆ ತಿಮ್ಮಯ್ಯ ರವರು ಸಾಕ್ಷಿದಾರರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೀಲಮ್ಮ ರವರು ಯಾವಾಗ ತೀರಿಕೊಂಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಅವರು 1989 ರಲ್ಲಿ ಮರಣಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ 1 ಮತ್ತು 2 ನೇ ಪ್ರತಿವಾದಿಯರು ಮರಣ ಶಾಸನದ ಪ್ರಕಾರ ತಮ್ಮ ಹೆಸರಿಗೆ ಖಾತಾ ವರ್ಗಾವಣೆ ಮಾಡುವಂತೆ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ನಂತರ ಕಂದಾಯ ಅಧಿಕಾರಿಗಳು ವಿಚಾರಣೆ ನಡೆಸಿ ಸದರಿಯವರ ಹೆಸರಿಗೆ ಖಾತಾ ವರ್ಗಾವಣೆ ಮಾಡುವಂತೆ ದಿನಾಂಕ 27.01.1990 ರಂದು ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ 1 ಮತ್ತು 2 ನೇ ಪ್ರತಿವಾದಿಯರು ದಾವಾ ಅನುಸೂಚಿ 1 ಮತ್ತು 2 ರ ಆಸ್ತಿಗಳ ಮಾಲಿಕರು ಹಾಗೂ ಕಬ್ಜಾದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಇದ್ದಾವೆ ಎಂದರೆ ಸರಿ. ಅವರ ಹೆಸರಿಗೆ ಖಾತಾ ವರ್ಗಾವಣೆ ಆಗಿರುವ ವಿಷಯ ಗೊತ್ತಿದ್ದರೂ ನೀವು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಸದರಿ ವಿಷಯ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಸರ್ವೆ ನಂ.66 ರಲ್ಲಿನ 04 ಎಕರೆ ಜಮೀನು ಸಹ ಹಿರಿಯರ ಆಸ್ತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ವಾದಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಿಮ್ಮ ತಂದೆ ವಾದಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾಡಿರಬಹುದು ಎಂದು ನುಡಿಯುತ್ತಾರೆ. ನಾವು ಉದ್ದೇಶಪೂರ್ವಕವಾಗಿ ಸದರಿ ಆಸ್ತಿಯ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

4. 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಕುಟುಂಬದ ಅಡಚಣೆಗಾಗಿ ತಮ್ಮ ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅದು ನಮಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ದಾವಾ ಅನುಸೂಚಿ 1 ಮತ್ತು 2 ರ ಆಸ್ತಿಗಳನ್ನು ಮರಣ ಶಾಸನದ ಅಡಿಯಲ್ಲಿ ಪಡೆದುಕೊಂಡು ಅವುಗಳ ಕಾನೂನು ಬದ್ಧ ಮಾಲಿಕರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನಮಗೆ ಸದರಿ ಆಸ್ತಿಗಳಲ್ಲಿ

ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ಮೇಲಿನ ಎಲ್ಲಾ ವಿಷಯಗಳು ನಮಗೆ ಗೊತ್ತಿದ್ದರೂ ಸುಳ್ಳು ಪ್ರತಿದಾವೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(6 ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.)

ಮರು ವಿಚಾರಣೆಃ ಇಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಹಿ/-

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ